ಗಾಂಧಿನಗರ ಪೋಸ್ಟ್



# ಸಿನಿಮಾ ಪ್ರೇಮಿ ಪ್ರವೀಣ್

**ಎಂಜಿನಿಯರಿಂಗ್ ಓದಿನ ಜೊತೆಗೆ ಕಥೆಗಾರರಾಗಿಯೂ ತಮ್ಮ ಹಾದಿ ಹೊರಳಿಸಿದ ಪ್ರವೀಣ್ ಕುಮಾರ್, ಸಿನಿಮಾರಂಗದ ಹತ್ತು ವರ್ಷಗಳ ಅನುಭವದೊಂದಿಗೆ ಸ್ವತಂತ್ರ ನಿರ್ದೇಶಕರಾಗಲು ಹೊರಟಿದ್ದಾರೆ. ಅವರ ನಿರ್ದೇಶನದ 'ಅಮರ ಪ್ರೇಮಿ ಅರುಣ್' ಏ. 25ಕ್ಕೆ ಬಿಡುಗಡೆಯಾಗುತ್ತಿದೆ.**

**■ ಬಿ.ವಿ. ಶ್ರೀನಾಥ್**

ಓದಿರುವುದು ಎಂಜಿನಿಯರಿಂಗ್. ಬದುಕಿಗೆ ಆಶ್ರಯಿಸಿರುವುದು ಚಿತ್ರರಂಗ. ಪ್ರವೃತ್ತಿ ಸಾಹಿತ್ಯ ರಚನೆ. ಇದು ಕಥೆಗಾರ, ಸಿನಿಮಾ ನಿರ್ದೇಶಕ ಪ್ರವೀಣ್ ಕುಮಾರ್ ಜಿ. ಅವರ ಒನ್‌ಲೈನ್ ಕಥೆ.

ಕೆಲವು ತಿಂಗಳ ಹಿಂದೆ ತಮ್ಮ ಮೊದಲ ಕಥಾ ಸಂಕಲನ 'ಎಡೆ' ಅನ್ನು ಕನ್ನಡ ಓದುಗರ ಕೈಗಿಟ್ಟಿದ್ದ ಪ್ರವೀಣ್, ಈಗ ತಮ್ಮ ಮೊದಲ ಸಿನಿಮಾ 'ಅಮರ ಪ್ರೇಮಿ ಅರುಣ್' ಅನ್ನು ಕನ್ನಡ ಪ್ರೇಕ್ಷಕರ ಮುಂದೆ ತರಲು ಸಜ್ಜಾಗಿದ್ದಾರೆ.

ಸುಮಾರು 15 ವರ್ಷಗಳ ಹಿಂದೆ ಪ್ರವೀಣ್ ಎಂಜಿನಿಯರಿಂಗ್ ಓದಲು ಬಳ್ಳಾರಿಯಿಂದ ಬೆಂಗಳೂರಿಗೆ ಬಂದಾಗ ಕಥೆ ಬರೆಯುವುದಾಗಲಿ, ಸಿನಿಮಾ ನಿರ್ದೇಶನ ಮಾಡುವುದಾಗಲಿ ಅವರ ಬದುಕಿನ ಆದ್ಯತೆಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರಲಿಲ್ಲ. ಪ್ರತಿಷ್ಠಿತ 'ಪೆಸಿಟ್'ನಲ್ಲಿ ಸೀಟು ಗಿಟ್ಟಿಸಿಕೊಂಡಾಗ ಮಗನ ಜೀವನ ಸೆಟ್ಲ್ ಆಯಿತು ಎಂದೇ ಹೆತ್ತವರು ಭಾವಿಸಿದ್ದರು. ಆದರೆ, ಅದೇ ಎಂಜಿನಿಯರಿಂಗ್ ಕಾಲೇಜು ಪ್ರವೀಣ್ ಅವರಲ್ಲಿ ಕಥೆಗಾರನಾಗುವ, ಸಿನಿಮಾ ನಿರ್ದೇಶಕನಾಗುವ ಕನಸು, ಕಸುವು ತುಂಬುತ್ತದೆ ಎಂದು ಹೆತ್ತವರಿರಲಿ, ಸ್ವತಃ ಅವರೂ ಊಹಿಸಿರಲಿಲ್ಲ.

ಪ್ರವೀಣ್ ಕುಮಾರ್ ಹುಟ್ಟಿದ್ದು ವಿಜಯನಗರ ಜಿಲ್ಲೆ ಹರಪನಹಳ್ಳಿಯ ಉಜ್ಜಿನಿಯಲ್ಲಿ. ತಂದೆಗೆ ಪೊಲೀಸ್ ಇಲಾಖೆಯಲ್ಲಿ ಕೆಲಸ. ಅಪ್ಪನ ಕೆಲಸದ ರೀತ್ಯಾ ಬಳ್ಳಾರಿ ಪ್ರಾಂತ್ಯದ ಸಂಡೂರು, ದೇವಗಿರಿ, ಹರಪನಹಳ್ಳಿ, ಹೂವಿನಹಡಗಲಿಯಲ್ಲಿ ಆರಂಭಿಕ ವಿದ್ಯಾಭ್ಯಾಸ ಮಾಡುತ್ತ, ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದ ಅಪ್ಪ ಅಮ್ಮನ ಊರುಗಳಲ್ಲಿ ಬೇಸಿಗೆ ಕಳೆಯುತ್ತ ಬೆಳೆದರು. ಉಜ್ಜಿನಿಯಲ್ಲಿದ್ದ ಥಿಯೇಟರ್‌ನಲ್ಲಿ ಸಿನಿಮಾ ನೋಡುವುದು, ಅಪ್ಪ ಬಂದೋಬಸ್ತ್‌ಗೆಂದು ಜಾತ್ರೆ, ಉತ್ಸವಗಳಿಗೆ ಹೋದಾಗ ಅಲ್ಲಿನ ಜ್ಞಾಪಕಾರ್ಥವಾಗಿ ತರುತ್ತಿದ್ದ ಪುಸ್ತಕಗಳನ್ನು ಓದುವುದು ಅವರಿಗೆ ಇಷ್ಟದ ಹವ್ಯಾಸವಾಗಿತ್ತು. ಇಷ್ಟಾದರೂ, ಪ್ರವೀಣ್ ಅವರಲ್ಲಿದ್ದ ಸೃಜನಶೀಲತೆಯನ್ನು ಪೊರೆದದ್ದು ಬೆಂಗಳೂರಿನ ಪಿಇಎಸ್ ಎಂಜಿನಿಯರಿಂಗ್ ಕಾಲೇಜು.

ಎಂಜಿನಿಯರಿಂಗ್ ಶಿಕ್ಷಣಕ್ಕೆ ಹೆಸರಾಗಿದ್ದ ಕಾಲೇಜ್ ಆಗಿದ್ದರೂ ಅಲ್ಲಿ ಆಗ ತರಹೇವಾರಿ ಆಸಕ್ತಿ, ಹವ್ಯಾಸಗಳ ಸಹಪಾಠಿಗಳಿದ್ದರು. ಅವರ ಸಖ್ಯದಿಂದ ಪ್ರವೀಣ್, ಕನ್ನಡ ಸಾಹಿತ್ಯದ ಮೇರುಕೃತಿಗಳನ್ನು ಓದತೊಡಗಿದರು. 'ನಥಿಂಗ್ ಬಟ್ ಟ್ರಬಲ್' ಎನ್ನುವ ಸಂಸ್ಥೆ ಕಟ್ಟಿಕೊಂಡು, ಅದರ ಮೂಲಕ ಪ್ರಚಲಿತ ವಿದ್ಯಮಾನಗಳ ವಿಡಂಬನೆ (ಮ್ಯಾಡ್ ಆ್ಯಡ್ಸ್), ಮೈಮ್ ಮಾಡತೊಡಗಿದರು. ಇವರ ತಂಡವು ವಿವಿಧ ಕಾಲೇಜುಗಳಲ್ಲಿ 60–70 ಶೋಗಳನ್ನು ನೀಡಿ ಹೆಸರು ಮಾಡಿತ್ತು.

ಎಂಜಿನಿಯರಿಂಗ್ ಮುಗಿದ ನಂತರ ಕೆಲವರು ದೇಶದ ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಸಂಪಾದಿಸಿದರೆ, ಕೆಲವರು ವಿದೇಶಗಳಿಗೆ ಹಾರಿದರು. ಆದರೆ, ಪ್ರವೀಣ್ ಸಂಪೂರ್ಣ ವಿರುದ್ಧ ದಿಕ್ಕಿನಲ್ಲಿ ಯೋಚಿಸತೊಡಗಿದರು; ಎಲ್ಲರೂ ಅವರ ಇಷ್ಟದ ದೇಶ/ಕೆಲಸ ಅರಸಿ ಹೋಗಿದ್ದಾರೆ. ನಾನು ಏಕೆ ನನ್ನ ಇಷ್ಟದ ಸಿನಿಮಾರಂಗವನ್ನೇ ನನ್ನ ಬದುಕಿನ ಕರ್ಮಭೂಮಿಯನ್ನಾಗಿ ಮಾಡಿಕೊಳ್ಳಬಾರದು ಎಂದು ಅನ್ನಿಸಿತು. ತಡಮಾಡದೇ ಪೋಷಕರ ಮುಂದೆ ವಿಷಯ ಪ್ರಸ್ತಾಪಿಸಿದರು. ಮಗನ ಮಾತು ಕೇಳಿ ಮೊದಲು ಅವರು ಹೌಹಾರಿದರು. ನಂತರ ಮಗನಿಗೆ ಅಪ್ಪ ಹೇಳಿದ್ದು ಒಂದೇ ಮಾತು: 'ನನಗೆ ಇನ್ನು ಎಂಟ್ಹತ್ತು ವರ್ಷ ಸರ್ವಿಸ್ ಇದೆ. ನಿನಗೆ ಏನು ಬೇಕೋ ಅದು ಮಾಡು'.

ಎಂಜಿನಿಯರಿಂಗ್ ನಂತರ ಸಿನಿಮಾ ಕಲಿಯಲು ಪೂನಾ ಫಿಲ್ಮ್ ಇನ್‌ಸ್ಟಿಟ್ಯೂಟ್‌ಗೆ ಹೋಗಬೇಕೆಂಬ ಆಸೆ ಹೊಂದಿದ್ದ ಪ್ರವೀಣ್ ಕೊನೆಗೆ, ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘ (ಕಾಡ್ಸಿಡಾ) ನಡೆಸುವ ನಿರ್ದೇಶನ ಕೋರ್ಸ್ ಸೇರಿದರು. ಅಲ್ಲಿ ಒಂದು ವರ್ಷ ಕಲಿತ ನಂತರ ಅವರು ಬಂದಿದ್ದು ಗಿರೀಶ ಕಾಸರವಳ್ಳಿ ಬಳಿಗೆ. ಆಗ ಕಾಸರವಳ್ಳಿಯವರು 'ಕೂರ್ಮಾವತಾರ' ತಯಾರಿಯಲ್ಲಿ ತೊಡಗಿದ್ದರು. ಅದಕ್ಕೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ ನಂತರ ಪ್ರವೀಣ್, 'ಸಕ್ಕರೆ', 'ಎಂದೆಂದೂ ನಿನಗಾಗಿ', 'ಕಹಿ' ಸಿನಿಮಾಗಳಲ್ಲಿ ಕೆಲಸ ಮಾಡಿ, ಯೋಗರಾಜ್ ಭಟ್ ಅವರ ತಂಡ ಸೇರಿದರು. ನಾಲ್ಕೈದು ವರ್ಷ

### ಕಥೆಗಳಾದ ಸಿನಿಮಾ ಎಳೆಗಳು...

ನಿರ್ದೇಶಕರಿಗೆ ಸಾಹಿತ್ಯದ ಪರಿಚಯವೂ ಇದ್ದರೆ ಉತ್ತಮ ಎನ್ನುವ ನೆಲೆಯಿಂದ ಹೊರಟ ಪ್ರವೀಣ್ ಅವರ ಸಾಹಿತ್ಯ ಆಸಕ್ತಿ ಅವರನ್ನು ಕಥೆಗಾರನನ್ನಾಗಿ ಮಾಡಿತು. ಸಿನಿಮಾ ಆಗಬಹುದಾದ ಎಳೆಗಳೇ ಕಥೆಗಳಾಗಿ ಮೈದಾಳಿದವು. ಇದುವರೆಗೆ ಅವರ 60ಕ್ಕೂ ಹೆಚ್ಚು ಕಥೆಗಳು ಕನ್ನಡದ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ತನ್ನ ಒಂದಾದರೂ ಕಥೆ 'ಮಯೂರ'ದಲ್ಲಿ ಪ್ರಕಟವಾದರೆ ಸಾಕು ಎಂದು ಬಯಸಿದ್ದ ಅವರು, 'ಎಡೆ' ಕಥೆ ಮಯೂರ ಮಾಸಪತ್ರಿಕೆಯಲ್ಲಿ ಪ್ರಕಟವಾದಾಗ ಸಂಭ್ರಮಿಸಿದ್ದರು; ಇದೇ ಹೆಸರಿನ ಕಥಾ ಸಂಕಲನವನ್ನು ಹೊರತಂದಿದ್ದಾರೆ. ತಮ್ಮ ಕಥೆಗಳಿಗೆ ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ ಮೆಚ್ಚುಗೆ ಪ್ರಶಸ್ತಿ ಸೇರಿದಂತೆ ಇದುವರೆಗೆ ಸುಮಾರು ಅರ್ಧ ಡಜನ್ ಪ್ರಶಸ್ತಿ, ಮನ್ನಣೆ ಪಡೆದಿದ್ದಾರೆ.